☎ 0836 - 2224098, 2224195
2224301, 2222616
2224274, 2222505

# ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ - 580 025

Vinyas COVERING FINAL VP

ಕ್ರ.ಸಂ.: ಹು.ಧಾ.ನ.ಪ್ರಾ : ಯೋ.ವಿ/ವಿನ್ಯಾಸ/91/2023-24 | 4748 ದಿನಾಂಕ : 13-01-2024 02

ಇವರಿಗೆ,

ಶ್ರೀ ರಾಜೇಸಾಬ ತಂದೆ ಹಸನಸಾಬ ಭಾಗವಾನ
ಹಾಗೂ ಇತರರು #115 1ನೇ ಮಹಡಿ ಸಿಗ್ನೇಟ ಮಾರವೆಲ್ ಬಿಲ್ಡಿಂಗ್ ಶಿರೂರ ಪಾರ್ಕ
ಕರ್ನಾಟಕ ಬ್ಯಾಂಕ ಎದುರುಗಡೆ ವಿದ್ಯಾನಗರ, ಹುಬ್ಬಳ್ಳಿ.

ಮಾನ್ಯರೇ,

ವಿಷಯ: ಹುಬ್ಬಳ್ಳಿ ನಗರ ತಾಲೂಕ **ಗಾಮನಗಟ್ಟಿ** ಗ್ರಾಮದ ಬ್ಲಾಕ ನಂ.**215/1ಬ** ಕ್ಷೇತ್ರ **02ಎಕರೆ-03ಗುಂಟೆ** ಪೈಕಿ **01ಎಕರೆ-14ಗುಂಟೆ-12.50ಆಣೆ ವಸತಿ** ಮತ್ತು **28ಗುಂಟೆ-03.50ಆಣೆ ಕೈಗಾರಿಕೆ,** ಬ್ಲಾಕ ನಂ. **215/1ಕ** ಕ್ಷೇತ್ರ **02ಎಕರೆ-25ಗುಂಟೆ ವಸತಿ, 215/3** ಕ್ಷೇತ್ರ **01ಎಕರೆ** ಪೈಕಿ **33ಗುಂಟೆ-02ಆಣೆ ವಸತಿ** ಮತ್ತು **06ಗುಂಟೆ-14ಆಣೆ ಕೈಗಾರಿಕೆ** ಹಾಗೂ **215/4** ಕ್ಷೇತ್ರ **35ಗುಂಟೆ ವಸತಿ** ಒಟ್ಟು ಕ್ಷೇತ್ರ **06ಎಕರೆ-23ಗುಂಟೆ** ಪ್ರದೇಶದಲ್ಲಿ ತಾತ್ಕಾಲಿಕ **ವಸತಿ** ಹಾಗೂ **ಕೈಗಾರಿಕೆ** ವಿನ್ಯಾಸ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1) ಅರ್ಜಿದಾರರ ಮನವಿ ದಿನಾಂಕ:14-12-2023
2) ಬಿನ್‌ಶೇತ್ಕಿ ಆದೇಶ ಸಂ.544869, 572228, 544886 ದಿ:05-12-2023, 544876, 544870, 544868 ದಿ: 06-12-2023
3) ಪ್ರಾಧಿಕಾರದ ಸಭೆಯ ದಿನಾಂಕ: 09-01-2024 ರ ವಿಷಯ ಸಂ. 03(20) ರ ತೀರ್ಮಾನ.
4) ಶುಲ್ಕ ತುಂಬಿದ ಚಲನ ನಂ. 00239,01099&01850ದಿನಾಂಕ: 20-01-2024

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ **ಹುಬ್ಬಳ್ಳಿ ನಗರ** ತಾಲೂಕ **ಗಾಮನಗಟ್ಟಿ** ಗ್ರಾಮದ ಬ್ಲಾಕ ನಂ.**215/1ಬ** ಕ್ಷೇತ್ರ **02ಎಕರೆ-03ಗುಂಟೆ** ಪೈಕಿ **01ಎಕರೆ-14ಗುಂಟೆ-12.50ಆಣೆ ವಸತಿ** ಮತ್ತು **28ಗುಂಟೆ-03.50ಆಣೆ ಕೈಗಾರಿಕೆ,** ಬ್ಲಾಕ ನಂ. **215/1ಕ** ಕ್ಷೇತ್ರ **02ಎಕರೆ-25ಗುಂಟೆ ವಸತಿ, 215/3** ಕ್ಷೇತ್ರ **01ಎಕರೆ** ಪೈಕಿ **33ಗುಂಟೆ-02ಆಣೆ ವಸತಿ** ಮತ್ತು **06ಗುಂಟೆ-14ಆಣೆ ಕೈಗಾರಿಕೆ** ಹಾಗೂ **215/4** ಕ್ಷೇತ್ರ **35ಗುಂಟೆ ವಸತಿ** ಒಟ್ಟು ಕ್ಷೇತ್ರ **06ಎಕರೆ-23ಗುಂಟೆ** ಪ್ರದೇಶದಲ್ಲಿ **ತಾತ್ಕಾಲಿಕ ವಸತಿ ಹಾಗೂ ಕೈಗಾರಿಕೆ ವಿನ್ಯಾಸ ಅನುಮೋದನೆ** ನೀಡುವ ಕುರಿತು ಉಲ್ಲೇಖ (1) ರಲ್ಲಿ ಮನವಿ ಸಲ್ಲಿಸಿರುತ್ತಿರಿ. ಉಲ್ಲೇಖ (2) ರನ್ವಯ ಮಾನ್ಯ ಜಿಲ್ಲಾಧಿಕಾರಿಗಳು ಜಮೀನನ್ನು **ವಸತಿ ಹಾಗೂ ಕೈಗಾರಿಕೆ** ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿ. ಉಲ್ಲೇಖ(3)ರ ಪ್ರಾಧಿಕಾರದ ಸಭೆಯಲ್ಲಿ ಸದರಿ ಜಮೀನಿಗೆ ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ತೀರ್ಮಾನಿಸಲಾಗಿದೆ. ಪ್ರಸ್ತಾಪಿತ ವಿನ್ಯಾಸ ನಕ್ಷೆಯನ್ನು ಮಹಾಯೋಜನೆ ಪರಿಷ್ಕೃತ-IIನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಲಾಗಿದೆ. ಉಲ್ಲೇಖ(4) ರನ್ವಯ, ಅರ್ಜಿದಾರರು ನಿಗದಿ ಪಡಿಸಿದ ಶುಲ್ಕವನ್ನು ಪಾವತಿಸಿರುತ್ತಾರೆ. **ಆದ್ದರಿಂದ ಸದರಿ ಜಮೀನಿಗೆ ಕೆಟಿಸಿಪಿ ತಿದ್ದುಪಡೆ ಕಾಯ್ದೆ ಕಲಂ 17(2ಎ) ರನ್ವಯ ಕರಡು ತಾತ್ಕಾಲಿಕ ವಸತಿ ವಿನ್ಯಾಸಕ್ಕೆ ಕೆಳಕಂಡ ಷರತ್ತುಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.**

1) ಸದರಿ ಮಂಜೂರಾತಿಯು ಈ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳಬೇಕು.
2) ಈ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಂಡು, ಮುಖ್ಯ ರಸ್ತೆಗಳ ಎರಡೂ ಕಡೆ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಕೊಳ್ಳಬೇಕು.
3) ಅನುಮೋದಿತ ವಿನ್ಯಾಸ ನಕ್ಷೆಯಲ್ಲಿರುವಂತೆಯೇ ನಿವೇಶನ, ರಸ್ತೆ ನಿರ್ಮಾಣ, ಪಕ್ಕಾ ಗಟಾರು ನಿರ್ಮಾಣ, ವಿದ್ಯುತ್ತೀಕರಣ, ಕುಡಿಯುವ ನೀರು ಸರಬರಾಜು ವ್ಯವಸ್ಥೆ ಹಾಗೂ ಒಳಚರಂಡಿ ವ್ಯವಸ್ಥೆ ಪ್ರದೇಶಗಳನ್ನು ವಿನ್ಯಾಸ ಮಾಲಿಕರು ಅಭಿವೃದ್ಧಿ ಪಡಿಸತಕ್ಕದ್ದು ಹಾಗೂ ಈ ಅಭಿವೃದ್ಧಿ ಕಾಮಗಾರಿಗಳು ಸಮರ್ಪಕವಾಗಿ ಪೂರ್ಣಗೊಂಡ ಬಗ್ಗೆ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಮುಕ್ತಾಯ ಪ್ರಮಾಣ ಪತ್ರ ಪಡೆಯತಕ್ಕದ್ದು ಹಾಗೂ ಈ ಸೌಕರ್ಯಗಳನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸತಕ್ಕದ್ದು. ಈ ಕಚೇರಿಯ ಪೂರ್ವಾನುಮತಿ ಇಲ್ಲದೇ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
4) ಅನುಮೋದಿತ ಕರಡು ವಸತಿ ವಿನ್ಯಾಸದಲ್ಲಿರುವ **ಉದ್ಯಾನವನ ಹಾಗೂ ರಸ್ತೆಗಾಗಿ** ನಿಗಧಿಪಡಿಸಿರುವ ಜಾಗೆಗಳನ್ನು ಅಭಿವೃದ್ಧಿಪಡಿಸಿ, ಯಾವ ಪರಿಹಾರ ಕೋರದೆ ಪುಕ್ಕಟೆಯಾಗಿ ಪರಿತ್ಯಜನಾ ಪತ್ರದ ಮೂಲಕ **ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ** ಇವರ ಹೆಸರಿಗೆ ಹಾಗೂ **ನಾಗರೀಕ ಸೌಲಭ್ಯ** ಜಾಗೆಯನ್ನು **ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ** ಇವರ ಹೆಸರಿಗೆ ನೋಂದಾಯಿಸಿ ಹಸ್ತಾಂತರಿಸಿಕೊಡತಕ್ಕದ್ದು.
5) ಅನುಮೋದಿತ ಕರಡು ಕೈಗಾರಿಕೆ ವಿನ್ಯಾಸದಲ್ಲಿರುವ **ರಸ್ತೆ, ಉದ್ಯಾನವನ, ಸೆಪ್ಟಿಕಟ್ಯಾಂಕ ಹಾಗೂ ವಾಹನನಿಲುಗಡೆ** ನಿಗಧಿಪಡಿಸಿರುವ ಜಾಗೆಗಳನ್ನು ಅಭಿವೃದ್ಧಿಪಡಿಸಿ, ಯಾವ ಪರಿಹಾರ ಕೋರದೆ ಪುಕ್ಕಟೆಯಾಗಿ ಪರಿತ್ಯಜನಾ ಪತ್ರದ ಮೂಲಕ **ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ** ಇವರ ಹೆಸರಿಗೆ ನೋಂದಾಯಿಸಿ ಹಸ್ತಾಂತರಿಸಿಕೊಡತಕ್ಕದ್ದು.
6) ವಿನ್ಯಾಸ ಪ್ರದೇಶವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವವರೆಗೆ ಕಟ್ಟಡ ನಿರ್ಮಾಣ ಮಾಡಬಾರದು.
7) ವಿನ್ಯಾಸದಲ್ಲಿ ಹಾಯ್ದು ಹೋಗುವ ವಿದ್ಯುತ್ ವಾಹಕಗಳನ್ನು ಹಾಗೂ ದೂರವಾಣಿ ತಂತಿಗಳನ್ನು ರಸ್ತೆ ಪಕ್ಕಕ್ಕೆ ಸ್ಥಳಾಂತರಿಸತಕ್ಕದ್ದು.

8) ಅಭಿವೃದ್ಧಿ ಕಾಮಗಾರಿಗಳು ಮುಗಿದ ನಂತರ ಸಂಬಂಧಪಟ್ಟ ಇಲಾಖೆ/ಕಚೇರಿಗಳಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದು ಪ್ರಾಧಿಕಾರಕ್ಕೆ ಹಾಜರಪಡಿಸತಕ್ಕದ್ದು.

9) ನಿಗದಿತ ಎರಡು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಮುಕ್ತಾಯ ಪ್ರಮಾಣ ಪತ್ರ ಪಡೆಯದೇ ಇದ್ದಲ್ಲಿ, ನಿವೇಶನಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

10) ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಪ್ರಾಧಿಕಾರದಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದ ನಂತರ ಕಟ್ಟಡ ಪರವಾನಿಗೆ ಮಹಾನಗರ ಪಾಲಿಕೆಗೆ ಸಂಪರ್ಕಿಸಿ ಪಡೆಯಬೇಕು.

11) ಸದರಿ ವಿನ್ಯಾಸಕ್ಕೆ ಸರ್ಕಾರದಿಂದ ಕಾಲಕಾಲಕ್ಕೆ ಬರುವ ಸುತ್ತೋಲೆ/ಅಧಿಸೂಚನೆಯ ನಿಯಮಾವಳಿಗಳನ್ನು ಪಾಲಿಸತಕ್ಕದ್ದು.

12) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ ಪ್ರಕರಣ 17(2ಎ) ರನ್ವಯ ಕರಡು ಅನುಮೋದನೆ ನೀಡಲಾಗಿದೆ. ವಿನ್ಯಾಸದ ಅನುಗುಣವಾಗಿ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಿ ಮುಕ್ತಾಯ ಪ್ರಮಾಣ ಪತ್ರ ಪಡೆದ ನಂತರ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಲಾಗುವುದು. ಕರಡು ವಿನ್ಯಾಸದಲ್ಲಿ ಯಾವುದೇ ಬದಲಾವಣೆ ಆದಲ್ಲಿ ಅಂತಿಮ ವಿನ್ಯಾಸ ಅನುಮೋದನೆ ಕಾಲಕ್ಕೆ ನಿಯಮಾನುಸಾರ ಪ್ರಾಧಿಕಾರದಿಂದ ಸೂಕ್ತ ಬದಲಾವಣೆ ಪಡೆಯತಕ್ಕದ್ದು ಹಾಗೂ ಅಂತಿಮ ವಿನ್ಯಾಸಕ್ಕೆ ಅನುಮೋದನೆ ಪಡೆಯದೇ ವಿನ್ಯಾಸದಲ್ಲಿನ ನಿವೇಶನಗಳನ್ನು ಪರಭಾರ ಮಾಡತಕ್ಕದ್ದಲ್ಲ.

13) ಸದರಿ ಕರಡು ಅನುಮೋದಿತ ವಿನ್ಯಾಸಕ್ಕೆ **ಸಹಾಯಕ ನಿರ್ದೇಶಕರು, ಭೂ–ದಾಖಲೆ ಹುಬ್ಬಳ್ಳಿ** ಇವರಿಂದ ಕೆ.ಜೆ.ಪಿ. ನಕ್ಷೆಯನ್ನು ತಯಾರಿಸಿ, ಪ್ರಾಧಿಕಾರಕ್ಕೆ ಪ್ರತಿಯನ್ನು ಹಾಜರು ಪಡಿಸುವುದು.

14) ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ, ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನಾಗಿ ರದ್ದುಗೊಳ್ಳುತ್ತದೆ.

15) ಕರಡು ಕೈಗಾರಿಕೆ ವಿನ್ಯಾಸದಲ್ಲಿ ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರ ಪಡೆದು ಕಟ್ಟಡ ಕಟ್ಟತಕ್ಕದ್ದು.

16) ವಿನ್ಯಾಸದ ಮಾಲೀಕರು ಕರ್ನಾಟಕ ರಿಯಲ್ ಎಸ್ಟೇಟ್(ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 2017ರನ್ವಯ ನೋಂದಾಯಿಸಿಕೊಳ್ಳತಕ್ಕದ್ದು.

ತಮ್ಮ ವಿಶ್ವಾಸಿ,
ಸಹಿ/–
ಆಯುಕ್ತರು
ಹುಬ್ಬಳ್ಳಿ–ಧಾರವಾಡನಗರಾಭಿವೃದ್ಧಿ ಪ್ರಾಧಿಕಾರ
ಹುಬ್ಬಳ್ಳಿ

**ಪ್ರತಿಯನ್ನು:**

1. **ADLR, Hubli/Dharwad** ಇವರಿಗೆ ವಿನ್ಯಾಸದಲ್ಲಿಯ ನಿವೇಶದ ಗಡಿಯನ್ನು ಗುರುತಿಸಿ, ಕೆ.ಜೆ.ಪಿ. ಶೀಟನ್ನು ತಯಾರಿಸಿ ಪ್ರಾಧಿಕಾರಕ್ಕೆ ಒಂದು ಪ್ರತಿಯನ್ನು ಸಲ್ಲಿಸಲು ಈ ಮೂಲಕ ಕಳುಹಿಸಲಾಗಿದೆ.
2. **EE, HESCOM, Hubli/Dharwad** ಇವರಿಗೆ ಕಳುಹಿಸುತ್ತಾ ವಿನ್ಯಾಸದಲ್ಲಿಯ ವಿದ್ಯುತ್ತೀಕರಣ ಕಾಮಗಾರಿಗಳ ಅಂದಾಜು ಪತ್ರಿಕೆ ತಯಾರಿಸಿ ಅದಕ್ಕೆ ತಗಲುವ ಮೇಲ್ವಿಚಾರಣಾ ಶುಲ್ಕಗಳನ್ನು ಭರಿಸಿಕೊಂಡು ತಮ್ಮ ಮೇಲ್ವಿಚಾರಣೆಯಲ್ಲಿ ಕೈಗೊಂಡು, ವಿದ್ಯುತ್ತೀಕರಣ ಕಾಮಗಾರಿಗಳಿಗೆ ಮುಕ್ತಾಯ ಪ್ರಮಾಣ ಪತ್ರ ನೀಡಲು ಸೂಚಿಸಲಾಗಿದೆ.
3. **EE, KUWS & DB, Hubli/Dharwad** ಇವರಿಗೆ ಸಲ್ಲಿಸುತ್ತಾ ಸದರಿ ವಿನ್ಯಾಸದಲ್ಲಿಯ ನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ತಯಾರಿಸಿಕೊಂಡು ತಮ್ಮ ಮೇಲ್ವಿಚಾರಣೆಯಲ್ಲಿ ಕಾಮಗಾರಿ ಕೈಕೊಂಡು ಮುಕ್ತಾಯ ಪ್ರಮಾಣ ಪತ್ರ ನೀಡಲು ಸೂಚಿಸಲಾಗಿದೆ.
4. **EE, HDUDA, Hubli** ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
5. **Commissioner, H.D.M.C, Hubli/Dharwad** ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

13/2/2021

ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ,
ಹುಬ್ಬಳ್ಳಿ